

# ಪಾತ್ರಕ್ಕೆ ನ್ಯಾಯ ನೀಡುವುದು ಧರ್ಮ

## ಚಂದನಾ

ಝೀ ಕನ್ನಡದ 'ನಾಗಿಣಿ' ಚಿತ್ರಾ

● *'ನಾಗಿಣಿ' ಗೊಂದಲದ ಗೂಡಾಗಿದೆಯಲ್ಲಾ ನಿಮಗೆ ತೊಂದರೆ ಆಗುವುದಿಲ್ಲವೇ?*

ಇದು ಮನೋಸಾಮಾಜಿಕ ವಿಷಯವನ್ನು ತೆಗೆದುಕೊಂಡು ಮನುಷ್ಯನ ಅಂತರಾಳದ ತಳಮಳವನ್ನು ಅನಾವರಣ ಮಾಡುವ ಕಥಾ ಹಂದರ ಹೊಂದಿದ ಧಾರಾವಾಹಿ. ಆಗಾಗ ಹೊಸ ಪಾತ್ರಗಳು ಪ್ರವೇಶವಾಗುತ್ತವೆ, ಆಗ ನಮಗೂ ಅರ್ಥ ಆಗುವುದಿಲ್ಲ. ಬೇರೆ ಧಾರಾವಾಹಿಯಲ್ಲಿ ನಟಿಸುವ ನಮ್ಮಂತವರು ನಮ್ಮ ನಮ್ಮ ಡೇಟ್‌ಗಳಿಗೆ ಮಾತ್ರ ಬರುತ್ತೇವೆ. ನಾನು ಮಾತ್ರ ಸೆಟ್‌ಗೆ ಬಂದ ತಕ್ಷಣ ಕಥೆಯನ್ನು ಮತ್ತೆ ಕೇಳುತ್ತೇನೆ. ಒಬ್ಬ ಕಲಾವಿದೆಯಾಗಿ ಪಾತ್ರವನ್ನು ನಿರ್ವಹಿಸುತ್ತೇನೆ. ಕಥೆ ಗೊತ್ತಾಗಬೇಕು, ಪಾತ್ರದ ಜೊತೆಗೆ ವ್ಯವಹರಿಸುವ ಪಾತ್ರಗಳ ನಡುವೆ ಏನು ಅನುಸಂಧಾನ ನಡೆಯುತ್ತಿದೆ ಎನ್ನುವುದು ಗೊತ್ತಾಗಬೇಕು. ವೀಕ್ಷಕರ ದೃಷ್ಟಿಯಲ್ಲಿ ಹೇಳುವುದಾದರೆ ತಪ್ಪದೇ ನೋಡುವವರಿಗೆ ಅಂತಹ ತೊಡಕು ಆಗಲಾರದು. ಮಧ್ಯದಲ್ಲಿ ಕೆಲವು ಕಂತುಗಳನ್ನು ನೋಡದಿದ್ದರೆ ಖಂಡಿತ ಗೊಂದಲ ಅನ್ನಿಸುತ್ತದೆ.

● *ನೀವು ನಟಿಯಾಗುವ ಮುನ್ನ ಏನಾಗಬೇಕು ಎಂಬ ಆಸೆ ಇತ್ತು?*

ಯಾವುದೇ ಒಂದು ಮಗು ಏನಾಗಬೇಕು ಎಂದು ಕೇಳಿದರೆ ಅದು ಡಾಕ್ಟರ್, ಎಂಜಿನಿಯರ್ ಎಂದೇ ಹೇಳುತ್ತದೆ. ನಾನೂ ಎಂಜಿನಿಯರ್ ಆಗಬೇಕು ಎಂದುಕೊಂಡೆ. ಬಿಸಿಎಗೆ ಸೇರಿದ್ದಷ್ಟೇ, ಅಷ್ಟರಲ್ಲಿಯೇ ನಟನೆಗೆ ಅವಕಾಶಗಳು ಬರತೊಡಗಿದವು. ನನ್ನ ಪಯಣದ ಮಾರ್ಗವೂ ತಿರುವು ಪಡೆಯಿತು. ಇದು ತುಂಬಾ ಆಕಸ್ಮಿಕ ಬೆಳವಣಿಗೆ. ಒಂದು ರೀತಿಯಲ್ಲಿ ಕನಸಿನಲ್ಲಿಯೂ ಅಂದುಕೊಳ್ಳದ ಹಾದಿಯಲ್ಲಿ ಸಾಗುವಂತೆ ಆಯಿತು. ಈಗ ನಟಿ ಆಗಿದ್ದೇನೆ ಎಂದರೆ ಪಾತ್ರಕ್ಕೆ ನ್ಯಾಯ ನೀಡುವುದು ನನ್ನ ಕೆಲಸ. ಅದನ್ನು ಮಾಡುತ್ತಿದ್ದೇನೆ. ಕಥೆ ಮತ್ತು ಪಾತ್ರದ ವಿಷಯದಲ್ಲಿ ಪಕ್ಕಾ ಲೆಕ್ಕಾಚಾರ ಹಾಕುತ್ತೇನೆ. ಆರಂಭದಿಂದಲೂ ನನಗೆ ಪ್ರಧಾನ ಪಾತ್ರಗಳೇ ಸಿಕ್ಕಿವೆ. ಹಾಗಾಗಿ ಅತಿಥಿ ಪಾತ್ರಗಳು ನನಗೆ ಇಷ್ಟ ಆಗುವುದಿಲ್ಲ. ನೆಗೆಟಿವ್ ಪಾತ್ರ ಇರಲಿ ಪಾಸಿಟಿವ್ ಪಾತ್ರ ಇರಲಿ ಕಥೆಯಲ್ಲಿ ಪಾತ್ರಕ್ಕೆ ಪ್ರಾಮುಖ್ಯತೆ ಇರಬೇಕು.

● *ಭಾಷಾ ಸ್ಪಷ್ಟತೆ, ಚಂದದ ಮಾತು ಹೇಗೆ ಸಿದ್ಧಿಸಿದ್ದು?*

ಬೆಂಗಳೂರಿನ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದ್ದೇನೆ. ನನ್ನ ಮಾತೃಭಾಷೆ ಕನ್ನಡ. ಇದು ಕೂಡ ನನಗೆ ಪ್ಲಸ್ ಪಾಯಿಂಟ್ ಆಗಿದೆ. ಅಭಿನಯಕ್ಕೆ ಒತ್ತಾಯ ಶುರುವಾದಾಗ ನಿಜಕ್ಕೂ ನಾನೂ ಅಧೀರಳಾಗಿದ್ದೆ. 'ಇದು ನನ್ನಿಂದ ಸಾಧ್ಯನಾ?' ಎಂದು ಯೋಚಿಸಿದ್ದೆ. ಒಮ್ಮೆ ನೋಡಿಯೇ ಬಿಡೋಣ ಎಂದು ಪ್ರಯತ್ನ ಮಾಡಿದೆ. ಅದೃಷ್ಟ ಕೈ ಹಿಡಿಯಿತು. ಎರಡು ಮೂರು ವರ್ಷದಿಂದ ನಿರಂತರವಾಗಿ ಇಲ್ಲಿ ದುಡಿಯುತ್ತಿದ್ದೇನೆ.

● *ತೃಪ್ತಿ ಸಿಕ್ಕಿದೆ ಅನ್ನಿಸುತ್ತಾ?*

ದೇವರು ಕೊಡುವುದನ್ನು ಕೊಟ್ಟಿದ್ದಾನೆ. ಕಾಲೇಜು ದಿನಗಳನ್ನು ಕಳೆದುಕೊಂಡೆ. ಆದರೆ ಅದಕ್ಕಿಂತ ಬೇರೆ ಇನ್ನೇನೋ ಪಡೆದುಕೊಂಡೆ. ಸಣ್ಣ ಮಟ್ಟದಲ್ಲಿ ನನ್ನದೇ ಆದ ಹೆಸರನ್ನು ಪಡೆಯಲು ಸಾಧ್ಯವಾಗಿದೆ. ಕಾಲೇಜು ಜೀವನದಲ್ಲಿ ತರಗತಿಗೆ ಬಂಕ್ ಹಾಕುವುದು ಅಧ್ಯಾಪಕರಿಂದ ಬೈಯಿಸಿಕೊಳ್ಳುವುದು, ಕೀಟಲೆ ಮಾಡುವ ಅವಕಾಶಗಳನ್ನು ಮಿಸ್ ಮಾಡಿಕೊಂಡೆ ಅಂತ ಬೇಸರ ಅನ್ನಿಸುತ್ತದೆ. ಆದರೆ ಎಲ್ಲದೂ ಎಲ್ಲರಿಗೂ ಸಿಗುವುದಿಲ್ಲ. ಒಂದಕ್ಕೆ ಮತ್ತೊಂದು ಅವಕಾಶ ಕಳೆದುಕೊಳ್ಳಬೇಕಾಗುತ್ತದೆ. ಈಗ ಚೆನ್ನಾಗಿದ್ದೇನೆ. ತೃಪ್ತಿಯಿಂದ ಇದ್ದೇನೆ.

● *ಪಾತ್ರದ ಆಯ್ಕೆಯನ್ನು ಹೇಗೆ ಮಾಡಿಕೊಳ್ಳುತ್ತೀರಿ?*

ಕಷ್ಟದಿಂದ ಮೇಲೆ ಬಂದಿದ್ದೇನೆ. ಸಹಾಯಕ ಅಥವಾ ಸೈಡ್ ಪಾತ್ರಗಳ ಕಡೆ ನೋಡಿದರೆ ಕೆರಿಯರ್‌ಗೆ ಹೊಡೆತ ಬೀಳುತ್ತದೆ. ಪಾತ್ರ ಎಷ್ಟೇ ಭಿನ್ನವಾಗಿದ್ದರೂ ಪಾತ್ರಕ್ಕೆ ನ್ಯಾಯ ಸಿಗಬೇಕು ಎನ್ನುವುದು ನನ್ನ ಭಾವನೆ. ಟಿವಿ ಕ್ಷೇತ್ರದಲ್ಲಿ ಹೇಗಿದೆ ಎಂದರೆ ಯಾರಾದರೂ ಒಂದು ಪಾತ್ರವನ್ನು ಮಾಡಿದರೆ ಹೆಚ್ಚು ಅದಕ್ಕೆ ಫಿಕ್ಸ್ ಮಾಡುತ್ತಾ ಮುಂದಿನ ಧಾರಾವಾಹಿಯಲ್ಲೂ ಅಂತಹದ್ದೇ ಪಾತ್ರಕ್ಕೆ ಕರೆಯುತ್ತಾರೆ. ಹೀಗೆ ಆಗುವುದರಿಂದ ಬ್ರಾಂಡ್ ಆಗುತ್ತೇವೆ. ಅದು ಆಗಬಾರದು ಎನ್ನುವುದು ನನ್ನ ಆಲೋಚನೆ.

● *ಅದೆಲ್ಲಾ ಸರಿ. ನೀವು ಯಾವಾಗ ಧಾರಾವಾಹಿ ನಿರ್ಮಿಸುತ್ತೀರಿ?*

ನನ್ನ ಬಹುದೊಡ್ಡ ಕನಸಿನಲ್ಲಿ ಅದೂ ಒಂದು. ಖಂಡಿತಾ ನಿರ್ದೇಶನ, ನಿರ್ಮಾಣ ಮಾಡುತ್ತೇನೆ. ಸದ್ಯದ ಪರಿಸ್ಥಿತಿಯಲ್ಲಿ ಅದು ಸಾಧ್ಯ ಆಗುವಂತಹದ್ದಲ್ಲ. ಆಸೆಗೇನೂ ಕಡಿಮೆ ಇರಲ್ಲ. ಆದರೆ ಎಲ್ಲದಕ್ಕೂ ಮಿತಿ ಇರಬೇಕು. ನಾನು ಏನೇ ಮಾಡಿದರೂ ಶೇ.100 ನ್ಯಾಯ ಕೊಡಬೇಕು ಎನ್ನುವ ಮನೋಧರ್ಮದವಳು.

■ ರಾಗು